11

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ72 ರ ಅಡಿಯಲ್ಲಿ ಕೇಳಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಕೋಲಾರ ಜಿಲ್ಲೆಯು ಬೆಂಗಳೂರಿಗೆ ಸಮೀಪ ಇರುವ ಜಿಲ್ಲೆಯಾಗಿದ್ದು, ಈ ಜಿಲ್ಲೆಯು ಪ್ರವಾಸಿಗಳ ತಾಣವೆಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದ್ದು, ಇದಕ್ಕೆ ಪೂರಕವೆಂಬಂತೆ, ಬಂಗಾರಪೇಟೆ ತಾಲ್ಲೂಕಿನ ಪಟ್ಟಣದಿಂದ ಕೇವಲ 12 ಕಿ.ಮೀ. ದೂರವಿರುವ ಬೂದಿಕೋಟೆ ಚಾರಿತ್ರಿಕ ಸ್ಥಳ. ಈ ಗ್ರಾಮದಲ್ಲಿ ಟಿಪ್ಪು ಸುಲ್ತಾನ್ ತಂದೆ ನವಾಜ್ ಹೈದರಾಲಿ ಹುಟ್ಟಿದ ಸ್ಥಳವಾಗಿರುವುದರಿಂದ ಗ್ರಾಮಕ್ಕೆ ವಿಶೇಷ ಸ್ಥಾನಮಾನವಿದೆ. ಈ ಗ್ರಾಮಕ್ಕೆ ಹಿಂದೆ ಇದ್ದ ಹೆಸರು ವಿಬೂದಿಪುರ ತದನಂತರ ಬೂದಿಕೋಟೆ ಎಂಬ ಹೆಸರು ಬಂದಿದ್ದು, ಇಲ್ಲಿ ಪಾಳು ಬಿದ್ದಿರುವ ಹೈದರಾಲಿ ಕೋಟೆಯನ್ನು ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸಿ ಪ್ರವಾಸಿ ತಾಣವಾಗಿ ಮಾಡಿದರೆ, ಸರ್ಕಾರಕ್ಕೂ ಆದಾಯ ಬರುವುದರ ಜೊತೆಗೆ ದೂರದ ಊರು, ಜಿಲ್ಲೆಗಳಿಂದ ವಾರಾಂತ್ಯದಲ್ಲಿ ನೂರಾರು ಪ್ರವಾಸಿಗರು ಕೋಟೆ ನೋಡಲು ಬರುತ್ತಾರೆ. ಬಂದವರಿಗೆ ನಿರಾಶೆಯಾಗುತ್ತಿರುವುದರಿಂದ ಈ ಸ್ಥಳವನ್ನು ಸರ್ಕಾರ ಕಡೆಗಣಿಸಿದ್ದು, ಇದನ್ನು ಅಭಿವೃದ್ಧಿ ಪಡಿಸುವ ದೃಷ್ಠಿಯಿಂದ ಈ ವಿಷಯವನ್ನು ಮಾನ್ಯ ಪ್ರವಾಸೋದ್ಯಮ ಸಚಿವರ ಗಮನ ಸೆಳೆಯ ಬಯಸುತ್ತೇನೆ.

*******

**ಉತ್ತರ:**

ಪ್ರವಾಸೋದ್ಯಮ ನೀತಿ 2020-25 ರಡಿಯಲ್ಲಿ ಕೋಲಾರ ಜಿಲ್ಲೆಯ, ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಬೂದಿಕೋಟೆಯನ್ನು ಪ್ರವಾಸಿ ತಾಣವನ್ನಾಗಿ ಗುರುತಿಸಲಾಗಿರುತ್ತದೆ.

ಸದರಿ ಬೂದಿಕೋಟೆ ಪ್ರವಾಸಿತಾಣವು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಭಾರತ ಸರ್ಕಾರರವರ ವ್ಯಾಪ್ತಿಗೆ ಒಳಪಡುತ್ತದೆ. ಈ ಕೋಟೆಯ ನಿರ್ವಹಣೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ನಿರ್ವಹಿಸುತ್ತಿದ್ದಾರೆ. ಸದರಿ ಪ್ರವಾಸಿ ತಾಣವನ್ನು ಅಭಿವೃದ್ಧಿ ಪಡಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

**ಟಿಓಆರ್ 07 ಟಿಡಿವಿ 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ, ಪರಿಸರ
ಮತ್ತು ಜೀವಿಶಾಸ್ತ್ರ, ಸಚಿವರು